ಮಲ್ಲಿಕಾರ್ಜುನ, ಸುರಧೇನುಪುರ

ನಾಯಿಯೊಂದಿಗೆ ವಾಯುವಿಹಾರ ಮಾಡುವವರ ಮರ್ಮವೇನು?



ನಾಯಿಗೆ ಹೆದರಿ ಭಿಕ್ಷುಕರು, ತಲೆ ತಿನ್ನುವವರು ದೂರ ಸರಿವರೆಂದು.

ವಾಸಣ್ಣ, ಧಾರವಾಡ

ಸುಖದ ಸುಪ್ಪತ್ತಿಗೆಯಲ್ಲಿರುವವರೂ ಮತ್ತಷ್ಟು ಸುಖ ಬೇಡುವರು. ಕಷ್ಟವನ್ನು ಯಾರೂ ಬೇಡರೇಕೆ?

ದುರ್ಯೋಧನನೇ ಬೇಡಿದ್ದನಲ್ಲ – ಕಷ್ಟವನ್ನು ನೀಡೆಂದು ಪಾಂಡವರಿಗೆ!

ಷಣ್ಮುಖ ಎಸ್.ಹೆಚ್. ಹಳೇಬಾತಿ

ಕಲಬೆರಕೆಯಿಂದ ಮುಕ್ತವಾದದ್ದು ಯಾವುದು?

ಆಳುವ ಪಕ್ಷದ ಬಗ್ಗೆ ಇರುವ ವಿರೋಧಪಕ್ಷದ ಶುದ್ಧ ದ್ವೇಷ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಯಮನು ಕೋಣ ಹತ್ತಿ ಭೂಲೋಕಕ್ಕೆ ಬಂದರೆ?



ಮಾಲಿನ್ಯದಿಂದ ಕೋಣದ ಮರಣ; ಯಮನಿಗೆ ಹೊಸ ಯಮಹಾ ಯೋಗ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಆಕಳು ಕಪ್ಪಾದರೆ ಹಾಲು ಕಪ್ಪೇ ಎಂಬ ಉಕ್ತಿಯ ರಹಸ್ಯವೇನಿರಬಹುದು?

ಎಂಥ ಆಕಳಾದರೂ ಒಂದು ಕಪ್ ಹಾಲು ಕೊಡದು, ಲೀಟರಾದರೂ ಕೊಡುವುದೆಂದು.

ಉಷಾ ಸೋಗಲ್, ಬೆಂಗಳೂರು

ವಿದ್ಯಾವಂತರಿಗಿಂತ ಅವಿದ್ಯಾವಂತರೇ ಹೆಚ್ಚು ಧೈರ್ಯಶಾಲಿಗಳಾಗಿರುತ್ತಾರಲ್ಲ?

ಅರಿವಿನ ಅಡ್ಡಿ ಇರದಲ್ಲ! ಹುಂಬತನಕ್ಕೆ ಹರಿವು ಹೆಚ್ಚು.

ಬೂಕನಕೆರೆ ವಿಜೇಂದ್ರ, ಮೈಸೂರು

ಹೆಣ್ಣುಮಕ್ಕಳೇ 'ಮನೆನಾಯಿ' ಸಾಕಲು ಇಷ್ಟ ಪಡುವುದೇಕೆ?

ಬಾ ಎಂದ ತಕ್ಷಣ ಲವ್ ಲೆಟರ್ ರೆಡಿ ಮಾಡಿಕೊಂಡು ಬರುವುದಿಲ್ಲವಾದ್ದರಿಂದ.

ಕುಣಿಗಲ್ ಜಯಣ್ಣ, ಪಾಂಡವಪುರ

ದೇವರು ಎಲ್ಲಿದ್ದಾನೆ?

ನಮ್ಮ ನಮ್ಮ ಕಲ್ಪನೆಗಳಲ್ಲಿ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಹೆಂಡತಿ ಇದ್ದರೂ ಬೇರೊಬ್ಬಳನ್ನು ಬಯಸುವವರಿಗೆ ಏನೆನ್ನಬೇಕು?

ಟಿಪಿಕಲ್ ಗಂಡ.

ಪಿ. ಜಯವಂತ ಪೈ, ಕುಂದಾಪುರ

ಇರುವೆಗಳಿಗೆ ಹೆದರಿ ಯುವತಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಳಂತಲ್ಲ?

ಅವಳನ್ನು ಪೀಡಿಸುವವನೊಬ್ಬ 'ನಾನು ಎಲ್ಲೆಲ್ಲೂ ಇರುವೆ' ಎಂದುದು ಅಸಲಿ ಕಾರಣವಂತೆ.

ಬಿ.ಆರ್. ಉಷಾ, ಬೆಂಗಳೂರು

ಸತ್ತವರನ್ನು 'ದೇವರ ಹತ್ತಿರ ಹೋದರು' ಎನ್ನುತ್ತಾರಲ್ಲ, ಅದರ ಅರ್ಥ?

ಅವರೂ ದೇವರಂತೆಯೇ ಯಾರ ಕಣ್ಣಿಗೂ ಬೀಳುವುದಿಲ್ಲ ಎಂದು.

ಬಿ.ಸಂ. ಸುಬ್ಬಣ್ಣ, ಬೆಂಗಳೂರು

ಯಮಧರ್ಮರಾಯ ಲಂಚ ಸ್ವೀಕರಿಸುವಂತಿದ್ದರೆ?

ಬಂಧುಗಳ 'ಪ್ರಯತ್ನ'ದಿಂದ ಎಷ್ಟೋ ಜನರ ವಿಲ್ ಶೀಘ್ರವಾಗಿ ಜಾರಿಗೆ ಬರುತ್ತಿತ್ತು.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ನೀವು 'ತೂಕ'ದ ವ್ಯಕ್ತಿಯೇ ರಾಮ್?

ಮಿಡಲ್ ಸ್ಕೂಲಲ್ಲೇ 'ತೂಕ'ಡಿಸುವ ವ್ಯಕ್ತಿ ಎಂಬ ಖ್ಯಾತಿ ಪಡೆದೆ.

ರಾಮಸ್ವಾಮಿ, ಭೀಮನಕಟ್ಟೆ

ಗಂಡಾಗುಂಡಿ ಎಂದರೇನು?

ಅತಿ ಹೆಚ್ಚು ಗಂಡಾಂತರ (ಆಕ್ಸಿಡೆಂಟ್) ಆಗಲು ಕಾರಣವಾಗುವ ಪಾಟ್‌ಹೋಲ್.

## ಬಹುಮಾನಿತ ಪ್ರಶ್ನೆ

ಬಿ. ಚಂದ್ರೇಗೌಡ, ಬೆಂಗಳೂರು

ಕನ್ನಡೇತರರು ಕನ್ನಡಿಗರಾಗಲು ಕನ್ನಡಿಗರಾಗಿ ನಾವು ಏನು ಮಾಡಬೇಕು?

ಕನ್ನಡ ಭಾಷೆಯ ಸೊಗಡು, ಸೊಬಗನ್ನು ನಾವು ಅರಿತು, ಇತರರಿಗೂ ಪರಿಚಯಿಸಬೇಕು.

ರತ್ನಜ, ಮೈಸೂರು

ಕೆಲ ಸ್ವಾಮೀಜಿಗಳಿಗೆ ಹಿಂದೆ 'ಸ್ವಾಮಿ'. ಕೆಲವರಿಗೆ ಮುಂದೆ 'ಸ್ವಾಮಿ'. ಹೀಗೇಕೆ?

ಹಿಂದೆ ಮುಂದೆ ಯೋಚಿಸದೆ ಕರೆಯುವವರೇ ಕಾರಣವಂತೆ.

ಬಾ.ರಂ. ಸುರೇಶ್, ತುಮಕೂರು

ಟೆಂಪಲ್ ರನ್ ಎಂದರೇನು?

ಮೂಢ ಮತದಾರನಿಗೆ ದೇವರ ಹೆಸರಿನಲ್ಲಿ ರಾಜಕೀಯ ನಾಯಕನು ತೊಡಿಸುವ ಮಕಮಲ್ ಟೋಪಿ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಒಲವಿನ ಪ್ರಿಯಲತೆ, ಅವಳದೇ ಚಿಂತೆ. ಏನು ಮಾಡುವುದು?



ಆ ಲತೆಯು ಹಬ್ಬಲು ಅವಶ್ಯವಾದ ಮರವಾಗಲು ಯತ್ನಿಸಿ.

ಶ್ರುತಿ ವಿ. ರಾಮಗುಂಡಿ, ಬೈಲಹೊಂಗಲ

ಒಂದು ವೇಳೆ ಪತ್ನಿಯು ಕನ್ನಡಿಯಾದರೆ ಅದರಲ್ಲಿ ಮೂಡುವ ಪ್ರತಿಬಿಂಬ ಯಾರದ್ದು?

ತವರಿನದು.

ಗುರುರಾಜ್ ಬ. ಕನ್ನೂರ, ಬಸವನಬಾಗೇವಾಡಿ

ಭಕ್ತಿಮಾರ್ಗಕ್ಕೂ, ಜ್ಞಾನಮಾರ್ಗಕ್ಕೂ ಇರುವ ವ್ಯತ್ಯಾಸವೇನು?

ಪ್ರಶ್ನಿಸದೆ ಒಪ್ಪುವುದು ಭಕ್ತಿಮಾರ್ಗ; ಪ್ರಶ್ನಿಸದೆ ಒಪ್ಪದಿರುವುದು ಜ್ಞಾನಮಾರ್ಗ.

■ ರಾಮ್